'ನಾನು ನಮ್ಮಮ್ಮ ಹೇಳಿದ ಮಾತು ಮೀರುತಿರಲಿಲ್ಲ, ಗೊತ್ತಾ? ನಿನ್ನ ಅಜ್ಜಿ ನಮ್ಮನೆಯ ಹೈಕಮಾಂಡ್ ಗೊತ್ತೇನು?!'– ನೀಲಿಯೂ ನಕ್ಕರು. 'ಅಷ್ಟು ಕಟ್ಟುನಿಟ್ಟಾಗಿ ಅಮ್ಮ ನನ್ನನ್ನು ಬೆಳೆಸಿದ್ದರು...'

'ಹವ್ವ್ ಸ್ಟುಪಿಡ್...' ಚಿನ್ನು ಕಣ್ಣರಳಿಸಿಕೊಂಡು ಹೇಳಿದಳು. 'ನೀವಿಬ್ಬರು ಹೀಗಿದ್ದಿದ್ದಕ್ಕೇ ನನ್ನಂಥ ಮಗಳು ಹುಟ್ಟಿರೋದು!' ಬೀಗಿದಳು. 'ನಾನೇನಾದರೂ ನಿನ್ನ ಪರಿಸ್ಥಿತಿಯಲ್ಲಿದ್ದಿದ್ದರೆ ಬೇರೇನೇ ಆಗುತಿತ್ತು, ಬಿಡು... ಹ್ಲೂಂ... ನನಗೀಗ ಅರ್ಥವಾಗುತ್ತೆ, ನೀನೇಕೆ ನನ್ನ ಮದುವೆ ಬಗ್ಗೆ ಇಷ್ಟು ತಲೆಕೆಡಿಸಿಕೊಂಡಿದ್ದೀ ಅಂತ...' ಎಂದು ನನಗೆ ಹೇಳಿದಳು.

'ನಾನಂತೂ ಆ ಶೇಷು ತಾತನ ಮಾತು ಎಷ್ಟು ನಂಬಿದ್ದೆ ಗೊತ್ತಾ? ನಾನು ನೋಡೋಕೆ ಚೆನ್ನಾಗಿಲ್ಲ... ನನ್ನನ್ನು ಕಟ್ಟಿಕೊಳ್ಳೋಕೆ ಯಾವ ಗಂಡು ಬರುತಾನೆ... ಅಂತೆಲ್ಲ ಯೋಚಿಸಿ ಕಂಗೆಟ್ಟುಹೋಗಿದ್ದೆ... ಮದುವೆ ಆದಮೇಲೂ ನನಗೆ ಇದೊಂದು ಒಪ್ಪಂದ ಅನಿಸೋಕೆ ಶುರುವಾಗಿಬಿಟ್ಟಿತ್ತು... ನಿಮ್ಮಪ್ಪನ್ನ ಆರೇಳು ತಿಂಗಳು ನಾನಾಗಿ ಮಾತೇ ಆಡಿಸಿರಲಿಲ್ಲ...'

'ಅಮ್ಮ ಅಮ್ಮ...' ಚಿನ್ನು, ಈಗ ಮತ್ತಷ್ಟು ಮುದ್ದು ತಾಳಿ ಹೇಳಿದಳು. 'ಯು ಆರ್ ದಿ ಕೂಲೆಸ್ಟ್ ಥಿಂಗ್ ಇನ್ ದಿ ವರ್ಲ್ಡ್... ನಿನಗೆ ಗೊತ್ತಿಲ್ಲ, ನೀನೆಷ್ಟು ಬ್ಯೂಟಿಫುಲ್ ಅಂತ... ಆದರೂ ವಿ ಆರ್ ಪೋಲ್ಸ್ ಅಪಾರ್ಟ್!!' ಬಳಿಕ, ತನ್ನ ಅಪ್ಪನತ್ತ ತಿರುಗಿ 'ಅಲ್ಲಪ್ಪ... ಆರೇಳು ತಿಂಗಳು ಅಮ್ಮ ನಿನ್ನ ಜೊತೆ ಮಾತಾಡಿರಲಿಲ್ಲವಂತಲ್ಲ, ಅದು ಹೇಗೆ ನಾನು ವರ್ಷದೊಳಗೆ ಹುಟ್ಟಿಬಂದೆ?!' ಎಂದು ಕಣ್ಣು ಹೊಡೆದಳು!

ಹೌದು... ನನಗೂ ನನ್ನ ಮಗಳಿಗೂ ನಡುವಿರುವುದು ಒನ್ನಮೂನೆ ಧ್ರುವಾಂತರವೇ ಸರಿ. ಶೀತೋಷ್ಣಗಳ ವಿಪರೀತ! ಬರೇ ಇಪ್ಪತ್ತೈದು ವರ್ಷಗಳ ಕಾಲದಲ್ಲಿ, ಏನೇನೆಲ್ಲ ಕಾಲಾಂತರವಾಗಿಬಿಟ್ಟಿದೆ!! ಅಥವಾ, ನಾನೇ ನನ್ನ ಕಾಲಕ್ಕೂ ಹೆಚ್ಚು ಹಿಂದಿದ್ದುಬಿಟ್ಟೆನೆ? ಇರಬಹುದೇನೋ... ಆದರೂ, ಆ ಶೇಷೂ ತಾತನ ಮಾತನ್ನೇಕೆ ನಾನು ಅಷ್ಟು ಗಂಭೀರವಾಗಿ ಗಣಿಸಿದೆ? ನನಗಿರಲಿ, ಈ ನೀಲಿಗಾದರೂ ಒಂದಷ್ಟು ಬುದ್ಧಿಯಿರಬೇಕಲ್ಲವೆ? ನನಗೆ ಶೇಷೂ ತಾತನ ಗಡಿ ಮೀರುವುದು ಕಷ್ಟವಾದಷ್ಟೇ, ಅವರಿಗೂ ಅವರಮ್ಮ ಎಳೆದ ಗೆರೆ ದಾಟುವುದು ದುಸ್ತರವಿದ್ದಿತೇ?

'ಅದು ಸರೀಮ್ಮ... ಅಪ್ಪನಿಗಾದರೂ ಅಜ್ಜಿ ಅವರ ಅಮ್ಮ... ನಿನಗೇನಮ್ಮ ಆಗಿತ್ತು, ಯಾವುದೋ ಬೀದಿದಾಸಯ್ಯನ ಮಾತು ಕೇಳಿಕೊಂಡು ಹಾಳಾಗಲಿಕ್ಕೆ?! ಸರಿ... ಈ ಅಪ್ಪ ಏನೋ ಸಭ್ಯ ಗಂಡಸು... ಬೇರೆ ಯಾರಾದರೂ ಸಿಕ್ಕಿದ್ದಿದ್ದರೆ?' ಚಿನ್ನು ಹೇಳಿದಳು. 'ಈ ಮಾತನ್ನ ನೀನು ಆ ಶೇಷೂ ತಾತ ಸಾಯೋಕೆ ಮೊದಲು ನನಗೆ ಹೇಳಬೇಕಿತ್ತು... ಗ್ರಹಚಾರ ಬಿಡಿಸಿರುತಿದ್ದೆ...' ಎಂದು ಕೆಂಗಣ್ಣು ತಾಳಿ, ನರ ಸೆಟೆಯಿಸಿಕೊಂಡು ಆಡಿದ್ದು, ಹುಚ್ಚಿಗೋ ಕೆಚ್ಚಿಗೋ... ಎಂದು ನನಗಾಗಲಿ, ನೀಲಿಗಾಗಲಿ ಫಕ್ಕನೆ ತಿಳಿಯಲಿಲ್ಲ.

'ಏನಾದರೂ ಆಗಲಿ ಬಿಡು, ಚಿನ್ನು... ಇವೆಲ್ಲ ಹಳೆಯ ಮಾತು. ಅದನ್ನು ಹಿಡಕೊಂಡು ಈಗ ಜಗ್ಗಾಡೋದೇಕೆ?' ನಾನೇ ಮಗಳನ್ನು ಸಂತೈಸಿದೆ. 'ನನಗೆ ಸದ್ಯದ ಖುಷಿ ಏನಂದರೆ, ನೀನು ಮದುವೆಗೆ ಒಲ್ಲೆ ಅಂದಿಲ್ಲವಲ್ಲ ಅದು... ಅದಷ್ಟೇ ನನಗೆ ಮುಖ್ಯ. ಬೇಗ ಯಾವನನ್ನಾದರೂ ಹುಡುಕಿಕೊಂಡು ಬಿಡೇ...' ಎಂದು ಛೇಡಿಸಿ ತಮಾಷೆ ಮಾಡಿದೆ. 'ನಾವಿಬ್ಬರೂ ಬದುಕಿರೋವಾಗಲೇ ಈ ಕೆಲಸ ಮಾಡುತೀಯಲ್ಲವಾ?' ನೀಲಿಯೂ ಹೇಳಿ ನಮ್ಮ ನಡುವಿನ ತಮಾಷೆಯನ್ನು ಊರ್ಜಿಸಿದರು. 'ಓಹ್ಹೋ... ಅಪ್ಪ, ಯು ಆರ್ ಟೂ ಮಚ್ಚ್!!' ಎಂದು